ಸಚಿವರಿಂದ 5 ಲಕ್ಷ ರೂ. ಘೋಷಣೆ | ಮಾದರಿ ಕಾರ್ಯ ಅನುಕರಣೀಯ: ಯು.ಬಿ. ವೆಂಕಟೇಶ್ | ಜ್ಞಾನ ವಿಸ್ತರಿಸುವ ಜಾಣರ ಗುರು

# ತವರಲ್ಲಿ ಹೊರಟ್ಟಿ ಅಕ್ಷರ ದಾಸೋಹ ಸೇವೆ

**ಮುಧೋಳ:** ಜನನಿ ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು... ಈ ವಾಕ್ಯವನ್ನು ಅಕ್ಷರಶಃ ಪಾಲಿಸಿ ತಮ್ಮ ಹುಟ್ಟೂರಿಗೆ ಅಕ್ಷರ ದಾಸೋಹ ಮಾಡಿ ಮಾದರಿಯಾದ ಸಭಾಪತಿ ಬಸವರಾಜ ಹೊರಟ್ಟಿ ಅವರ ತವರಿಗೆ ಸ್ವತಃ ಶಿಕ್ಷಣ ಮಂತ್ರಿ ಮಧು ಬಂಗಾರಪ್ಪ, ಶಾಸಕ ಹಾಗೂ ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಯು.ಬಿ. ವೆಂಕಟೇಶ, ಶಾಸಕ ಪ್ರತಾಪಸಿಂಹ ನಾಯಿಕ ಭೇಟಿ ನೀಡಿ ಮನಸಾರೆ ಶ್ಲಾಘಿಸಿದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸರಕಾರಿ ಶಾಲೆ ಈ ಮಟ್ಟದಲ್ಲಿ ಸುಧಾರಣೆಯಾಗಿದ್ದಕ್ಕೆ ತುಂಬು ಅಭಿಮಾನವನ್ನು ಹಾಡಿ ಹೊಗಳಿದರಲ್ಲದೇ ಸಭಾಪತಿ ಬಸವರಾಜ ಹೊರಟ್ಟಿ ಅವರ ಕಳಕಳಿ ಮೆಚ್ಚಿದರಲ್ಲದೇ ತಾವೂ ಐದು ಲಕ್ಷ ರೂ.ಗಳನ್ನು ಶಾಲೆಗೆ ನೀಡುವದಾಗಿ ಘೋಷಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮೂರಿನ ಮುಧೋಳ ತಾಲೂಕಿನ ಯಡಹಳ್ಳಿಯಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಸರಕಾರಿ ಶಾಲೆ ಸ್ಥಾಪಿಸಿ ಸಕಲ ಸೌಲಭ್ಯವನ್ನು ಕೊಡಿಸುವದಲ್ಲದೇ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಹೈಟೆಕ್ ಶಾಲೆಯಾಗಿ ಪರಿವರ್ತಿಸಿ ಮಾದರಿಯಾಗಿದ್ದಾರೆ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾರಣದಿಂದ ಇಲ್ಲಿ ಹೈಟೆಕ್ ಶಾಲೆ ಸ್ಥಾಪಿಸುವ ಮೂಲಕ ಹುಟ್ಟೂರಿನ ಋಣ ತೀರಿಸಿರುವುದಾಗಿ ಹೇಳಿದರು.



ಮುಧೋಳ ತಾಲೂಕಿನ ಯಡಹಳ್ಳಿಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಟ್ಟಿಸಿದ ಶಾಲೆಗೆ ಸಚಿವ ಮಧು ಬಂಗಾರಪ್ಪ, ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಯು.ಬಿ. ವೆಂಕಟೇಶ್, ಶಾಸಕ ಪ್ರತಾಪಸಿಂಹ ನಾಯಿಕ ಅವರು ಭೇಟಿ ನೀಡಿದ ಶಾಲೆ ಪ್ರಗತಿಗೆ ಸಂತಸ ವ್ಯಕ್ತಪಡಿಸಿದ ಸಂದರ್ಭ. ಹೊರಟ್ಟಿಯವರಲ್ಲದೇ ಇತರ ಗಣ್ಯರು, ಅಧಿಕಾರಿಗಳು ಹಾಜರಿದ್ದರು.

ಸ್ವಂತ ಜಮೀನು ದಾನವಾಗಿ ನೀಡಿ ಹೈಟೆಕ್ ಶಾಲೆ ನಿರ್ಮಾಣ ಮಾಡಿ ಗ್ರಾಮೀಣ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಭಾಪತಿ ಹೊರಟ್ಟಿ ಅವರು ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆಂದು ಶಾಸಕ ಹಾಗೂ ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಯು.ಬಿ. ವೆಂಕಟೇಶ್ ಅಭಿಮಾನದಿಂದ ಹೇಳಿದರು. ವೆಂಕಟೇಶ್ ಅವರು ವಿದ್ಯಾರ್ಥಿಗಳ ಡೆಸ್ಕ್ ಮೇಲೆ ಕುಳಿತು ಆನಂದಿಸಿದರು. ಶಾಲಾ ದಿನಗಳನ್ನು ನೆನೆದು ತಾವು ಕಲಿಯುವಾಗ ಈಗಿನ ವಿದ್ಯಾರ್ಥಿಗಳಂತೆ ಇಷ್ಟೊಂದು ಸವಲತ್ತುಗಳಿರಲಿಲ್ಲ. ಈಗಿನ ಮಕ್ಕಳು ಭಾಗ್ಯವಂತರು. ಇಂಥ ಸೌಲಭ್ಯವನ್ನು ಪಡೆಯಬೇಕಲ್ಲದೇ ಹೊರಟ್ಟಿ ಅವರ ಕಾಳಜಿಗೆ ಉತ್ತರವಾಗಿ ಮಕ್ಕಳು ಜಾಣರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಂಯುಕ್ತ ಕರ್ನಾಟಕ ಹೊರತರುವ 'ಜಾಣರ ಗುರು' ಪತ್ರಿಕೆಯ ಗುಣಮಟ್ಟ ಕಂಡು ಸ್ವತಃ ಮಾಜಿ ಸಚಿವರು ಹಾಗೂ ಹಾಲಿ ಸಭಾಪತಿ ಆಗಿರುವ ಬಸವರಾಜ ಹೊರಟ್ಟಿ ಅವರು ಯಡಹಳ್ಳಿ ಶಾಲೆಯ ಮಕ್ಕಳಿಗೆ ದೊರೆಯುವಂತೆ ಆಸಕ್ತಿಯಿಂದ ಪ್ರಾಯೋಜನೆ ಮಾಡಿದ್ದಾರೆ. ಈ ಕುರಿತಂತೆ ಯು.ಬಿ. ವೆಂಕಟೇಶ, ಸಚಿವ ಮಧು ಬಂಗಾರಪ್ಪ, ಮತ್ತು ಹೊರಟ್ಟಿ ಅವರು ಮಕ್ಕಳಿಂದ ಪ್ರತಿಕ್ರಿಯೆ ಕೇಳಿದರು. ಜಾಣರ ಗುರು ನಮ್ಮ ಜ್ಞಾನವನ್ನು ವಿಸ್ತರಿಸುತ್ತದೆ. ಆಕರ್ಷಕವಾಗಿದ್ದು ವೈವಿಧ್ಯಮಯವಾಗಿದೆ ಎಂದು ಅಲ್ಲಿನ ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡಿದರು.

Hubli Edition